**ECA-6/2020** **ಪಿ.ಡಬ್ಲ್ಯೂ-1 (ವಿದ್ಯಾಶಂಕರ್)**

ದಿನಾಂಕಃ **18.02.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎಸ್.ಸಿ.ಕೆ. ವಕೀಲರಿಂದಃ</u>**

ನಾನು ಈ ಹಿಂದೆ ಡ್ರೈವರ್ ಕೆಲಸ ಮಾಡುತ್ತಿದ್ದೆ. ಹಿಂದೆ ಶ್ರೀರಂಗಪಟ್ಟಣ ಕಾರು ಚಾಲಕ ಸಂಘದ ಸದಸ್ಯ ಕೂಡ ಆಗಿರುತ್ತೇನೆ. ಸದರಿ ಸಂಘದಿಂದ ಸದಸ್ಯರಿಗೆ ಗುರುತಿನ ಚೀಟಿ ನೀಡಲಾಗುತ್ತದೆ ಎಂದರೆ ಸರಿಯಲ್ಲ. ಸದರಿ ಸಂಘದಲ್ಲಿ 10 ಮಂದಿ ಸದಸ್ಯರಿರುತ್ತಾರೆ. ಅಪಘಾತಕ್ಕೂ 1 ವರ್ಷಕ್ಕೂ ಮೊದಲು ಸಂಘದ ಸದಸ್ಯನಾಗಿರುತ್ತೇನೆ. ಕರೆದಲ್ಲಿಗೆ ನಾನು ಚಾಲಕನಾಗಿ ಹೋಗುತ್ತಿದ್ದೆನು. 1 ನೇ ಎದುರುದಾರರು ಪರಿಯಸ್ಥರು, ಆತ ಶ್ರೀರಂಗಪಟ್ಟಣದ ನಿವಾಸಿ ಆಗಿದ್ದು, ಕೃಷಿಕರಾಗಿರುತ್ತಾರೆ. 1 ನೇ ಎದುರುದಾರರು ಧರ್ಮಸ್ಥಳಕ್ಕೆ ಹೋಗಲು ನನ್ನನ್ನು ಕರೆದಿರುತ್ತಾರೆ. ನಾನು 1 ನೇ ಎದುರುದಾರರ ಪ್ರಶ್ನಿತ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿರಲಿಲ್ಲ, ಅವರಿಂದ ಪ್ರತಿದಿನ 1,000/- ವೇತನ, ರೂ.50/- ಬಾಟಾ ಪಡೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರು ಕರೆದಾಗ ಅವರ ಬಳಿಗೆ ಕೆಲಸಕ್ಕೆ ಹೋಗುತ್ತಿದ್ದೆನು. ಪ್ರತಿದಿನ ವೇತನ ಮತ್ತು ಬಾಟಾ ಕುರಿತಂತೆ 1 ನೇ ಎದುರುದಾರರು ಮತ್ತು ನನ್ನ ನಡುವೆ ಯಾವುದೇ ಲಿಖಿತ ಕರಾರು ಆಗಿರಲಿಲ್ಲ. ವೇತನ ಮತ್ತು ಬಾಟಾವನ್ನು ನಗದು ರೂಪದಲ್ಲಿ ನೀಡುತ್ತಿದ್ದರು.

2. ನಾನು, 1 ನೇ ಎದುರುದಾರರು, ಅವರ ಹೆಂಡತಿ ಸರಸ್ವತಿ ಮತ್ತು ಅವರ ಅಕ್ಕನ ಮಗ ಚಂದನ್ ಕುಮಾರ್ ಆ ದಿನ ಕಾರಿನಲ್ಲಿ ಹೋಗುತ್ತಿದ್ದರು. ಶ್ರೀರಂಗಪಟ್ಟಣದಿಂದ ಹೊರಟಿರುತ್ತಾರೆ. ಬೇಲೂರು ರಸ್ತೆ ಶಂಕನಹಳ್ಳಿ ಕ್ರಾಸ್ ಬಳಿ ಅಪಘಾತವಾಗಿರುತ್ತದೆ. 1 ನೇ ಎದುರುದಾರ ಮತ್ತು ನಾನು ಸ್ನೇಹಿತ. ನಾನು ಯಾವತ್ತು 1 ನೇ ಎದುರುದಾರರ ನೌಕರನಾಗಿ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿರಲಿಲ್ಲ. ಆದ ಅಪಘಾತವನ್ನು ದುರುಪಯೋಗಪಡಿಸಿಕೊಂಡು

ಪರಿಹಾರ ಪಡೆಯುವ ಸಲುವಾಗಿ ನೌಕರ – ಮಾಲೀಕ ಎಂದು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಮತ್ತು ನಾನು ಯಾವತ್ತೂ ನೌಕರ ಮತ್ತು ಮಾಲೀಕ ಸಂಬಂಧದಲ್ಲಿ ಕೆಲಸ ಮಾಡುತ್ತಿರಲಿಲ್ಲ, ಈ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಕುತ್ತಿಗೆ ಮತ್ತು ತಲೆಗೆ ಗಾಯವಾಗಿರುತ್ತದೆ. ಹಾಸನದ ಸ್ಪರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಜೆ.ಎಸ್.ಎಸ್. ಮೈಸೂರಿನ ಆಸ್ಪತೆಯಲ್ಲಿ 2 ದಿನ ಒಳರೋಗಿಯಾಗಿ ದಾಖಲಾಗಿ ನಂತರ ಕೊಯಮತ್ತೂರು ಗಂಗಾ ಆಸ್ಪತ್ರೆಯಲ್ಲಿ ಒಟ್ಟಾರೆ 2 ತಿಂಗಳು ಒಳರೋಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಪ್ರತಿ ತಿಂಗಳು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಕಡೆಯ ಬಾರಿ 2025 ಡಿಸೆಂಬರ್ ತಿಂಗಳಿನಲ್ಲಿ ಗಂಗಾ ಆಸ್ಪತ್ರೆಗೆ ಭೇಟಿ ಕೊಟ್ಟಿರುತ್ತೇನೆ. 2025 ಡಿಸೆಂಬರ್ ತಿಂಗಳಿನಲ್ಲಿ ಗಂಗಾ ಆಸ್ಪತ್ರೆಗೆ ಭೇಟಿ ಕೊಟ್ಟಿರುತ್ತೇನೆ ಎಂದು ತೋರಿಸಲು ದಾಖಲೆ ಇದೆ. ಗಂಗಾ ಆಸ್ಪತ್ರೆಯಲ್ಲಿ ಸ್ಪೈನಲ್ ಕಾರ್ಡ್ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುತ್ತೇನೆ. ಕೈ ಸ್ಟಿಕ್ನೆಸ್, ನೋವು ಇತ್ಯಾದಿಗೆ ಅಲ್ಲಿನ ವೈದ್ಯರು ಔಷಧಿ ಕೊಟ್ಟಿರುತ್ತಾರೆ.

4. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಬಿಲ್ ನಂ.32 ಅನ್ನು ಸಾಕ್ಷಿಗೆ ತೋರಿಸಿ ರೋಗಿಯ ಹೆಸರು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಬಿಲ್ ನಂ.58 ಮತ್ತು 59 ಅನ್ನು ಎರಡು ಬಾರಿ ಹಾಜರುಪಡಿಸಿರುತ್ತೇನೆ ಹಾಗೂ ಬಿಲ್ ನಂ.70 ರಿಂದ 72, 75 ರಲ್ಲಿ ಆಸ್ಪತ್ರೆ ಹೆಸರು ನಮೂದಿಸಿರುವುದಿಲ್ಲ, ಬಿಲ್ ನಂ.76 ರಲ್ಲಿ ಯಾರಿಗೆ ಪಾವತಿಸಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಅವುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

5. ಅಪಘಾತವಾದ ನಂತರ ನಾನು ಸಕ್ಕರೆ ಖಾಯಿಲೆಗೆ ಒಳಗಾಗಿರುತ್ತೇನೆ. ಬಿಲ್ ನಂ.126 ರಿಂದ 158 ಬಿಲ್ ಗಳು ಸಕ್ಕರೆ ಖಾಯಿಲೆಗೆ ಸಂಬಂಧಿಸಿದಂತೆ

ನೀಡಿದ ಔಷಧಿಗಳಾಗಿದ್ದು, ಸದರಿ ಖರ್ಚನ್ನು ಎದುರುದಾರರು ಭರಿಸಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿರುವ ದಾಖಲೆಗಳನ್ನು ಸೃಷಿಸಲಾಗಿದೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಒಳರೋಗಿಯಾಗಿ 10,00,000/- ರೂ. ಚಿಕಿತ್ಸೆಗೆ ಖರ್ಚಾಗಿದೆ ಎಂದು ಸುಳ್ಳಾಗಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮುಖ್ಯ ವಿಚಾರಣೆಯಲ್ಲಿ ಇತರೇ ಖರ್ಚುಗಳನ್ನು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಬಾಬ್ತು ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಜನ್ಮ ದಿನಾಂಕ 08.06.1975 ಆಗಿರುತ್ತದೆ. ತಿಂಗಳಿಗೆ 25,000/- ರೂ. ಸಂಪಾದಿಸುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಪ್ರಸ್ತುತ ಏನು ಕೆಲಸ ಮಾಡುತ್ತಿಲ್ಲ. ಈ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಪೋಲೀಸರು ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಪರಿಹಾರ ಪಡೆಯುವ ಸಲುವಾಗಿ ಸತ್ಯಾಂಶವನ್ನು ಮರೆಮಾಚಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**1 ನೇ ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ.,**
**ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**